ಆ) ಯಾವುದೇ ಹೊಸ ಪಶುವೈದ್ಯ ಸಂಸ್ಥೆಯನ್ನು ಮಂಜೂರು ಮಾಡುವ ಕಾರ್ಯಕ್ರಮ ಇರುವುದಿಲ್ಲ

ಇ) ಮತ್ತು ಈ) ಮೇಲಿನ 'ಅ' ಕ್ಕೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಲ್ವಿಚಾರಕರು

221 (129) ಶ್ರೀ ಚಲುವನಾರಾಯಣ ಸ್ವಾಮಿ ಎನ್ (ನಾಗಮಂಗಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೇಲ್ವಿಚಾರಕರನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿ ನೌಕರರನ್ನು ಮಾತೃ ಇಲಾಖೆಗೆ ವಾಪಸ್ಸು ಕಳುಹಿಸಲಾಗುವುದೇ ಇಲ್ಲದಿದ್ದರೆ, ವಿವರ ನೀಡುವುದು

ಆ) ನಾಗಮಂಗಲ ತಾಲ್ಲೂಕು ಬೆಳ್ಳೂರು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮೇಲ್ವಿಚಾರಕರಕರು ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ಬಂದಿದ್ದು, ಇವರ ಮೇಲೆ ಸಾರ್ವಜನಿಕವಾಗಿ ದೂರು ಇದ್ದು, ಅಮಾನತ್ತುಗೊಂಡಿರುತ್ತಾರೆ ಆದರೂ ಇವರನ್ನು ಪುನ ಇದೇ ಹುದ್ದೆಗೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದರೆ ರದ್ದುಪಡಿಸಲು ಕ್ರಮವೇನು?

ಶ್ರೀ ಎ ಕೃಷ್ಣಪ್ಪ, (ಸಮಾಜ ಕಲ್ಯಾಣ ಸಚಿವರು)

ಅ) ಶಿಕ್ಷಣ ಇಲಾಖೆಯಿಂದ ಹಲವು ಸಹ ಶಿಕ್ಷಕರು ನಿಯೋಜನೆಯ ಮೇಲೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಹಲವು ವಿದ್ಯಾರ್ಥಿನಿಲಯಗಳಲ್ಲಿ ನಿಲಯ ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಖಾಲಿ ಇರುವ ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಿದ ನಂತರ ಅಥವಾ ಶೈಕ್ಷಣಿಕ ವರ್ಷ ಮುಗಿದ ನಂತರ ಈ ನೌಕರರನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸಲಾಗುವುದು ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರ ವಿವರಗಳನ್ನು ಅನುಬಂದ – 1 ಮತ್ತು 2 ರಲ್ಲಿ ಒದಗಿಸಲಾಗಿದೆ

ಆ) ಸಮಾಜ ಕಲ್ಯಾಣ ಇಲಾಖೆ

ಅನ್ವಯಿಸುವುದಿಲ್ಲ

ಹಿಂದುಳಿದ ವರ್ಗಗಳ ಇಲಾಖೆ

ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ ಶ್ರೀ ಜಯರಾಮೇಗೌಡ, ಸಹಶಿಕ್ಷಕರು, ನಿಯೋಜನೆ ಮೇಲೆ ಬೆಳ್ಳೂರು ಮಟ್ರಿಕ್–ಪೂರ್ವ ಬಾಲಕರ ವಸತಿ ನಿಲಯದಲ್ಲಿ ನಿಯೋಜನೆಯ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್ ಮಂಡ್ಯ ಇವರು ದಿನಾಂಕ 23–9–2003ರ ಆದೇಶದಲ್ಲಿ ಈ ನೌಕರನನ್ನು ಅಮಾನತ್ತಿನಲ್ಲಿ ಇಟ್ಟಿರುತ್ತಾರೆ ಅನಂತರ ಅಮಾನತ್ತಿನ ಆದೇಶವನ್ನು ಹಿಂತೆಗೆದು ಸ್ಥಳ ಬದಲಾವಣೆ ಮಾಡಿ ಈ ನೌಕರನನ್ನು ಮೆಟ್ರಿಕ್– ಪೂರ್ವ ಬಾಲಕರ ವಸತಿನಿಲಯ, ಚೀಣ್ಯ, ನಾಗಮಂಗಲ ತಾಲ್ಲೂಕು ಇಲ್ಲಿಗೆ ನಿಯೋಜಿಸಿರುತ್ತಾರೆ

ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷ ಮುಕ್ತಾಯವಾದ ನಂತರ ಈ ನೌಕರನನ್ನು ಮಾತೃ ಇಲಾಖೆಯಾದ ಶಿಕ್ಷಣ ಇಲಾಖೆಗೆ ವಾಪಸ್ಸು ಕಳುಹಿಸಲಾಗುತ್ತದೆ

ಅನುಬಂಧ –1

ಸಮಾಜ ಕಲ್ಯಾಣ ಇಲಾಖೆ

ಕ್ರ ಸಂ	ನೌಕರರ ಹೆಸರು	ವಿದ್ಯಾರ್ಥಿನಿಲಯದ ಹೆಸರು
		ತುಮಕೂರು ಜಿಲ್ಲೆ
1	ಶ್ರೀ ಗಂಗಯ್ಯ	ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ತಿಪಟೂರು ಮಂಡ್ಯ
	ಶ್ರೀ ಕಾಂತರಾಜು	ಸಾರ್ವಜನಿಕರ ಬಾಲಕರ ವಿದ್ಯಾರ್ಥಿನಿಲಯ, ಶೀಳನಕೆರೆ, ಕೆ ಆರ್ ಪೇಟೆ ತಾಲ್ಲೂಕು
		ಕೋಲಾರ ಜಿಲ್ಲೆ
1	ಶ್ರೀ ವೆಂಕಟಾಚಲಪತಿ	ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಕೊರ್ಲಪರ್ತಿ, ಚಿಂತಾಮಣಿ ತಾ
2	ಶ್ರೀ ಸುಬ್ರಮಣಿ	ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಮುಳಬಾಗಿಲು ಟೌನ್
3	ಶ್ರೀ ಫಕ್ಕೈ ಸಾಬ್	ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಅಮ್ಮನಲ್ಲೂರು, ಕೋಲಾರ ತಾ
4	ಶ್ರೀ ಜಿ ನಾಗರಾಜ್	ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಲಯ, ಶ್ರೀನಿವಾಸಪುರ ಟೌನ್

ಅನುಬಂಧ –2

ಹಿಂದುಳಿದ ವರ್ಗಗಳ ಇಲಾಖೆ

ಕ್ರ ಸಂ	ನೌಕರರ ಹೆಸರು	ವಿದ್ಯಾರ್ಥಿನಿಲಯದ ಹಸರು
		ಮಂಡ್ಯ ಜಿಲ್ಲೆ
1	ಶ್ರೀ ದೊಡ್ಡಶೆಟ್ಟಿ	ಮೆಟ್ರಿಕ್–ಪೂರ್ವ ಬಾಲಕರ ವಸತಿ ನಿಲಯ, ಮಳವಳ್ಳಿ ತಾ
2	ಶ್ರೀ ಎಂ ಶಿವರಾಜು	ಮೆಟ್ರಿಕ್–ಪೂರ್ವ ಬಾಲಕೀಯರ ವಸತಿ ನಿಲಯ, ಹಳೆಹಳ್ಳಿ ಮದ್ದೂರು ತಾ
3	ಶ್ರೀ ಕೆ ಗೋಪಾಲ	ಮೆಟ್ರಿಕ್–ಪೂರ್ವ ಬಾಲಕೀಯರ ವಸತಿ ನಿಲಯ, ಬಿಳೀದೇಗುಲ, ಮಂಡ್ಯ ತಾ
4	ಶ್ರೀ ವೆಂಕಟಶೆಟ್ಟಿ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬೆಟ್ಟಂಕನಹಳ್ಳಿ, ಶ್ರೀರಂಗಪಟ್ಟಣ ತಾ
5	ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ	ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಬೆಟ್ಟಂಕನಹಳ್ಳಿ ಮಳವಳ್ಳಿ ತಾ
6	ಶ್ರೀ ಎಲ್ ಜಿ ಶಂಕರ್,	ಮೆಟ್ರಿಕ್–ಪೂರ್ವ ಬಾಲಕಿಯರ ವಸತಿನಿಲಯ, ಮೇಲುಕೋಟೆ ಪಾಂಡವಪುರ ತಾ

1	2	3
7	ಶ್ರೀ ಚೆಲುವರಾಯ	ಮೆಟ್ರಿಕ್ ಪೂರ್ವ ಬಾಲಕೀಯರ ವಸತಿನಿಲಯ ಶ್ರೀರಂಗಪಟ್ಟಣ ಟೌನ್
8	ಶ್ರೀ ಜಯರಾಮೇಗೌಡ	ಮೆಟ್ರಿಕ್ ಪೂರ್ವ ಬಾಲಕರ ವಸತಿನಿಲಯ, ಚೀಣ್ಯ, ನಾಗಮಂಗಲ ತಾ
9	ಶ್ರೀ ಹೆಚ್ ಎಸ್ ಚಂದ್ರಶೇಖರ್,	ಮೆಟ್ರಿಕ್, ನಂತರದ ಬಾಲಕರ ವಸತಿನಿಲಯ, ಕೆ ಆರ್ ಪೇಟೆ ಟೌನ್
		ಕೋಲಾರ ಜಿಲ್ಲೆ
1	ಶ್ರೀ ವಿ ಶ್ರೀನಿವಾಸ	ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಸುಗಟೂರು, ಕೋಲಾರ ತಾ
2	ಶ್ರೀ ಹರಿದಾಸ್	ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಚಿಕ್ಕಬಳ್ಳಾಪುರ ಟೌನ್
		ಚಿಕ್ಕಮಗಳೂರು
1	ಶ್ರೀ ಶಂಕರನಾಯಕ್	ಮೆಟ್ರಿಕ್ ಪೂರ್ವ ಬಾಲಕರ ವಸತಿನಿಲಯ, ತರೀಕೆರೆ ಟೌನ್
		ಮೈಸೂರು ಜಿಲ್ಲೆ
1	ಶ್ರೀ ಹೆಚ್ ಕೆ ಶಂಕರ್,	ಮೆಟ್ರಿಕ್ ಪೂರ್ವ ಬಾಲಕರ ವಸತಿನಿಲಯ, ತಲಕಾಡು, ಟೀನರಸೀಪುರ ತಾ
2	ಶ್ರೀ ಎಂ ಪಿ ಗಂಗಾಧರ್,	ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಚಿತ್ತೂರು, ಪಿರಿಯಾಪಟ್ಟಣ ತಾ

ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿ ಕೈಗಾರಿಕಾ ವಸಾಹತು ಅಭಿವೃದ್ಧಿ

222(248) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿ ಕೈಗಾರಿಕೆ ವಸಾಹತು ಪ್ರದೇಶ ಅಭಿವೃದ್ಧಿ ಯೋಜನೆ ಸಲುವಾಗಿ ಭೂ ಸ್ವಾಧೀನ ಮಾಡಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು ಸದರಿ ಜಮೀನಿಗೆ ನೀಡಲಾದ ಪರಿಹಾರ ಮೊತ್ತವೆಷ್ಟು ಈ ಯೋಜನೆಯ ಸಲುವಾಗಿ ಭೂ ಸ್ವಾಧೀನಪಡಿಸಿಕೊಳ್ಳಲು ಹೊರಟಿರುವ ಸರ್ಕಾರಿ ಭೂಮಿಯ ಬಗರ್‌ಹುಕುಂ ಸಾಗುವಳಿದಾರರಿಗೆ ಪರಿಹಾರ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ ವಿವರ ನೀಡುವುದು

ಆ) ಮೇಲ್ಕಂಡ ಕೈಗಾರಿಕಾ ವಸಾಹತು ಪ್ರದೇಶಕ್ಕೆ ಸೂಕ್ತ ನೀರು ಸರಬರಾಜು ಸಂಪರ್ಕ ಕಲ್ಪಿಸುವ ಯೋಜನೆ ಸರ್ಕಾರದ ಮುಂದಿದೆಯೆ ತಿಳಿಸುವುದು

ಇ) ಶಿವಮೊಗ್ಗ ತಾ ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಈ ಹಿಂದೆಯೇ ವಿತರಿಸಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು ಹಾಲಿ ಎಷ್ಟು ಕೈಗಾರಿಕೆಗಳು ನಡೆಯುತ್ತಿದ್ದು, ಅವುಗಳಲ್ಲಿ ಸ್ಥಗಿತಗೊಂಡಿರುವ ಕೈಗಾರಿಕೆಗಳ ವಿವರ ನೀಡುವುದು